ಓ:ಎಸ್. 37/2022
ಪಿ.ಡಬ್ಲೂ.1

<u>ದಿನಾಂಕಃ**15-09-2022** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು</u>

## ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ-

ನಾನು ಈ ಕೇಸಿನಲ್ಲಿ ವಾದಿ ಇದ್ದು, ನನ್ನ ಸಾಕ್ಷ್ಯದ ಮುಖ್ಯ ವಿಚಾರಣೆಯಾಗಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದೆ.

ದಿಃ17/12/2021 ರ ವಿಶೇಷ ಮುಕ್ತಾರ್ ನಾಮೆ ಪತ್ರ, 2 ಆರ್ ಟಿ ಸಿ ಗಳು, ವಕೀಲರ ನೋಟೀಸಿನ ಕಛೇರಿ ಪ್ರತಿ, 7 ಆರ್ ಪಿ ಎಡಿ ರಶೀದಿಗಳು, 4 ಆರ್ ಎ ಡಿ ಸ್ವೀಕೃತಿಗಳು, 2 ಅರ್ ಪಿ ಎ ಡಿ ವಾಪಾಸಾದ್ದ ಕವರುಗಳು, 2 ಬ್ಯಾಂಕ್ ಪುಸ್ತಕಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 19 ಎಂದು ಗುರುತಿಸಲಾಯ್ತು.

ದಿಃ25/8/2013, 25/8/2016, 03/9/2014 ರ ಕರಾರುಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಮೊದಲನೇ ಕರಾರುಪತ್ರ 200/- ರೂ. ಛಾಪಾ ಕಾಗದದ ಮೇಲೆ ಬರೆಯಲಾಗಿದೆ. ಅದರಲ್ಲಿ 22,50,000/- ಕ್ರಯದ ಮೊತ್ತ ತೋರಿಸಲಾಗಿದೆ ಅದೇ ರೀತಿ 2 ನೇ ಕರಾರುಪತ್ರದಲ್ಲಿ 45,00,000/- ಹಣ ತೋರಿಸಲಾಗಿದೆ. ಸದರಿ ದಾಖಲೆಯನ್ನು 200 ರೂ. ಛಾಪಾ ಕಾಗದದ ಮೇಲೆ ಬರೆಯಲಾಗಿದೆ. 3 ನೇ ದಾಖಲೆಯಲ್ಲಿ 1 ಲಕ್ಷ ಹಣ ಸ್ವೀಕರಿಸಿದ ಬಗ್ಗೆ ಉಲ್ಲೇಖ ಇರುತ್ತವೆ. ಸದರಿ ದಾಖಲೆಯನ್ನ 2 ರೂ. ಛಾಪಾ ಕಾಗದದ ಮೇಲೆ ಬರೆಯಲಾಗಿದೆ. ಮೇಲ್ನೋಟಕ್ಕೆ ಸದರಿ ದಾಖಲೆಗಳು ಅವಶ್ಯಕ ಛಾಪಾ ಕಾಗದದ ಹಣದ ಕೊರತೆಯಿಂದ ಬಳಲುತಿರುತ್ತವೆ. ಈ ಬಗ್ಗೆ ವಾದ ಕೇಳಲು ಹಾಗೂ ಅವಶ್ಯಕ ಛಾಪಾ ಕಾಗದದ ಹಣ ಪಾವತಿಸಲು ಮುಂದೂಡಲಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-
**(**ಎಂ ಸಿ ನಂಜೇಗೌಡ**)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.